ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಹೊಂದಿರುವ ಗ್ರಾಮಗಳ ಬಗ್ಗೆ

ಶೆಳಳ ಶ್ರೀ ನಾರಾಯಣಸ್ವಾಮಿ, (ಬೇತಮಂಗಲ):— ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ೧೯೮೮–೮೯, ೧೯೮೯–೯೦ನೇ ಸಾಲಿನಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕಗಳನ್ನು ಒದಗಿಸಲಾಗಿದೆ. (ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಗೆ ಸರ್ಕಾರದಿಂದ ಮೆಚ್ಚಿವಾದ ಹಣವೆಷ್ಟು;

ಇ) ಈ ವರ್ಷ ಸರ್ಕಾರ ಈ ಯೋಜನೆಯಡಿಯಲ್ಲಿ ಎಷ್ಟು ಹಳ್ಳಿಗಳಿಗೆ ವಿದ್ಯುತ್ ಸಂಪರ್ಕಗಳನ್ನು ಒದಗಿಸುವ ಗುರಿ ಹೊಂದಿದೆ ಹಾಗೂ ಇದಕ್ಕೆ ಮೆಚ್ಚಿವಾಗುವ ಹಣವೆಷ್ಟು?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).

ಅ) ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ಹಳ್ಳಿಗಳ ವಿದ್ಯುದ್ದೀಕರಣವನ್ನು ಮಾಡುವುದಿಲ್ಲ. ಆದರೆ ಈ ಯೋಜನೆಯನ್ವಯ, ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯುದ್ದೀಕರಿಸಿದ ಕಂದಾಯ ಗ್ರಾಮಗಳಲ್ಲಿ ಸಮಾಜದ ದುರ್ಬಲವರ್ಗ ಮತ್ತು ಕಡುಬಡವರ ಮನೆಗಳಿಗೆ ಒಂದು ಬಲ್ಬು ಉಳ್ಳ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದು.

೧೯೮೮–೮೯ನೇ ಸಾಲಿನಲ್ಲಿ ೨೩,೮೬೬ ಮನೆಗಳಿಗೂ ಮತ್ತು ೧೯೮೯–೯೦ನೇ ಸಾಲಿನಲ್ಲಿ ೨೦,೪೫೪ ಮನೆಗಳಿಗೂ ವಿದ್ಯುತ್ ಒದಗಿಸಲಾಗಿದೆ.

ಆ) ಈ ಯೋಜನೆಗೆ ಮಾರ್ಚ್ ೧೯೯೦ರ ಅಂತ್ಯದವರೆಗೆ ೧೦.೭೬ ಕೋಟಿ ರೂ. ಗಳ ಮೆಚ್ಚಿವಾಗಿದೆ.

ಇ) ಈ ಸಾಲಿನಲ್ಲಿ (೧೯೯೦–೯೧) ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ೨೧,೦೦೦ ಫಲಾನುಭವಿಗಳ ಮನೆಗಳಿಗೆ ವಿದ್ಯುತ್ ಸಂಪರ್ಕ ಕಟ್ಟಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ ಮತ್ತು ಇದಕ್ಕೆ ತಗಲುವ ಅಂದಾಜು ಮೆಚ್ಚಿ ೮೦ ಲಕ್ಷ ರೂ.

ಬೆಂಗಳೂರಿಂ ನಗರದಲ್ಲಿ ಗುರುವಾರ ಮತ್ತು ಶನಿವಾರ ದೂರದರ್ಶನದಲ್ಲಿ ಕನ್ನಡ ಕಾರ್ಯಕ್ರಮಗಳಿರುವುದರಿಂದ ಅಂದಿನ ವಿದ್ಯುತ್ ಲೋಡ್‌ಶೆಡ್ಡಿಂಗ್ ಸಮಯವನ್ನು ಬದಲಾಯಿಸುವ ಬಗ್ಗೆ.

ಶೆಳಳಿ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):— ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗುರುವಾರ ಮತ್ತು ಶನಿವಾರಗಳಂದು ದೂರದರ್ಶನದಲ್ಲಿ ಜನಪ್ರಿಯ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುವಾಗ ಕರ್ನಾಟಕ ವಿದ್ಯುತ್ ಮಂಡಳಿಯವರು ಲೋಡ್ ಶೆಡ್ಡಿಂಗ್ ಮಾಡುವ ಸಲುವಾಗಿ ವಿದ್ಯುತ್ ನಿಲುಗಡೆಗೊಳಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಗುರುವಾರ ಮತ್ತು ಶನಿವಾರಗಳಂದು ದೂರದರ್ಶನದಲ್ಲಿ ಜನಪ್ರಿಯ ಕಾರ್ಯಕ್ರಮಗಳನ್ನು ನಾಗರೀಕರು ನೋಡಲು ಅನುಕೂಲವಾಗುವಂತೆ ಅಂದಿನ ಲೋಡ್ ಶೆಡ್ಡಿಂಗ್ ವೇಳೆಯನ್ನು ಬೆಳಗಿನ ವೇಳೆಯಲ್ಲಿ ಜಾರಿಗೆ ತರಲು ಆಲೋಚಿಸುವುದೆ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಈ ಮುಂದೆ ನಗರ ಪ್ರದೇಶಗಳಲ್ಲಿ ಸಾಯಂಕಾಲ ೬ ರಿಂದ ೯ ಗಂಟೆಯವರೆಗೆ ಮಂಡಳಿಯು ಮಾಡುತ್ತಿದ್ದ ನಿಯಮಿತ ಲೋಡ್ ಶೆಡ್ಡಿಂಗ್ ಅನ್ನು ೧–೬–೧೯೯೦ ರಿಂದ ನಿಲ್ಲಿಸಲಾಗಿದೆ.

ಆ) 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.